**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ**

**ನ್ಯಾಯಿಕ ದಂಡಧಿಕಾರಿಗಳ ನ್ಯಾಯಾಲಯ, ಕುಷ್ಟಗಿ**

**ಸಿ ಸಿ ಸಂಖ್ಯೆಃ 1458/2022** **ಸಿಡಬ್ಲ್ಯೂ ಃ 19**

**ಪಿಡಬ್ಲ್ಯೂ ಃ 5**

| | | |
|---|---|---|
| **ಸಾಕ್ಷಿದಾರರ ಹೆಸರು** | ಃ | **ನಿಂಗಪ್ಪ ಎನ್ ಆರ್** |
| **ತಂದೆಯ ಹೆಸರು** | ಃ | **ನಂದಪ್ಪ** |
| **ವಯಸ್ಸು** | ಃ | **43 ವರ್ಷ** |
| **ಉದ್ಯೋಗ** | ಃ | **ಪಿ. ಐ.** |
| **ವಾಸ** | ಃ | **ರಾಯಚೂರು** |

**ದಿನಾಂಕಃ 19.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ**

1. ನಾನು ದಿನಾಂಕಃ 20.09.2020 ರಿಂದ ದಿನಾಂಕಃ 10.08.2023 ರವರೆಗೆ ಕುಷ್ಟಗಿಯಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕಃ13.08.2022 ರಂದು 10.00 ಗಂಟೆಯ ಸುಮಾರಿಗೆ ಕಡತವನ್ನು ಚಾಸಾ 18 ರವರಿಂದ ಪಡೆದುಕೊಂಡು ಪರಿಶೀಲಿಸಿರುತ್ತೇನೆ. ನಂತರ ಕುಷ್ಟಗಿ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿ ಚಾಸಾ 2 ಮತ್ತು 3 ರವರ ಸಮಕ್ಷಮ ಮೃತ ಯಲ್ಲಪ್ಪನ ಶವಪಂಚನಾಮೆಯನ್ನು 11.00 ರಿಂದ 12.00 ಗಂಟೆಯವರೆಗೆ ಮಾಡಿ, ಫೋಟೊ ತೆಗೆಸಿರುತ್ತೇನೆ ಹಾಗೂ 65 ಬಿ ಪ್ರಮಾಣ ಪತ್ರ ತೆಗೆದುಕೊಂಡಿರುತ್ತೇನೆ. ನಂತರ ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ 2 ಮತ್ತು 3 ರವರ ಸಮಕ್ಷಮ ಪಂಚನಾಮೆ ಮಾಡಿ, 15 ಕುರಿಗಳು ಸ್ಥಳದಲ್ಲಿ ಮೃತಪಟ್ಟ ಬಗ್ಗೆ, 3 ಕುರಿಗಳು ಭಾರಿ ಗಾಯ ಆದ ಬಗ್ಗೆ ಹಾಗೂ 20 ಕುರಿಗಳು ಸಾದಾ ಗಾಯ ಆದ ಬಗ್ಗೆ ಪಂಚನಾಮೆಯನ್ನು 01.00 ರಿಂದ 02.00 ಗಂಟೆಯವರೆಗೆ ಮಾಡಿ ಫೋಟೊ ತೆಗೆಸಿರುತ್ತೇನೆ ಹಾಗೂ 65 ಬಿ ತೆಗೆದುಕೊಂಡಿರುತ್ತೇನೆ. ಅದೇ ದಿನ ಚಾಸಾ 1 ರವರು

ತೋರಿಸಿದ ಕೃತ್ಯ ನಡೆದ ಸ್ಥಳವನ್ನು ಚಾಸಾ 4 ಮತ್ತು 5 ರವರ ಸಮಕ್ಷಮ ಮಧ್ಯಾಹ್ನ 03.30 ರಿಂದ 04.30 ಗಂಟೆಯವರೆಗೆ ಮಾಡಿ ಸ್ಥಳದಲ್ಲಿದ್ದ ಕೆಎ 20/ಪಿ 7745 ಮಿನಿ ಟ್ಯಾಂಕರ್ ಲಾರಿಯನ್ನು ಐಎಮ್ ವಿ ತಪಾಸಣೆಗಾಗಿ ತಡೆ ಹಿಡಿದಿರುತ್ತೇನೆ ಹಾಗೂ ಫೋಟೊ ತೆಗೆಸಿರುತ್ತೇನೆ ಮತ್ತು 65 ಬಿ ತೆಗೆದಿರುತ್ತೇನೆ.

3. ಅದೇ ದಿನ ಚಾಸಾ 1, 6 ರಿಂದ 14 ರವರ ಹೇಳಿಕೆ ಪಡೆದಿರುತ್ತೇನೆ. ನಂತರ ಅದೇ ದಿನ ಹಿರಿಯ ಪಶು ವೈದ್ಯಾಧಿಕಾರಿಗಳು ಕುಷ್ಟಗಿ ಇವರಿಗೆ ಸತ್ತ ಕುರಿಗಳ ಪಿ ಎಮ್ ಮತ್ತು ಗಾಯಗೊಂಡ ಕುರಿಗಳಿಗೆ ಚಿಕಿತ್ಸೆ ನೀಡುವ ಕುರಿತು ಪತ್ರ ನೀಡಿರುತ್ತೇನೆ.

4. ದಿನಾಂಕ 14.08.2022 ರಂದು ಆರೋಪಿಯನ್ನು ದಸ್ತಗಿರಿ ಮಾಡಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿನಾಂಕ 16.08.2022 ರಂದು ಮೃತನ ಪಿ ಎಮ್ ವರದಿಯನ್ನು ಚಾಸಾ 15 ರವರಿಂದ ಪಡೆದಿರುತ್ತೇನೆ. ಅದೇ ದಿನ ಆರ್ ಟಿ ಒ ಅವರ ವರದಿಯನ್ನು ಚಾಸಾ 16 ರವರಿಂದ ಪಡೆದಿರುತ್ತೇನೆ. 1 ನೇ ಆರೋಪಿಗೆ ಕಲಂ 133 ಐ ಎಮ್ ವಿ ಅಡಿ ನೋಟೀಸ್ ಜಾರಿ ಮಾಡಿ ಟ್ರಾಕ್ಟರ ದಾಖಲಾತಿಗಳನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 18.08.2022 ರಂದು ವಾಹನದ ಮಾಲೀಕ ಉದಯಕುಮಾರ ಅವರಿಗೆ ಕಲಂ 133 ಐಎಮ್‌ವಿ ಅಡಿ ನೊಟೀಸ್ ನೀಡಿರುತ್ತೇನೆ. ಅವರ ಪರವಾಗಿ ಜಿಪಿಎ ಹೋಲ್ಡರ್ ಜಿ.ಶಂಕರ ಅವರು ಜಿಪಿಎ ಕಾಪಿ ಹಾಜರುಪಡಿಸಿದ್ದು, ಅವರಿಂದ ವಾಹನದ ಆರ್ ಸಿ, ಇನ್ಸೂರೆನ್ಸ್, ಫಿಟ್ನೆಸ್ ಸರ್ಟಿಫಿಕೇಟ್ ಹಾಗೂ ಇಂಡಿಮಿನಿಟಿ ಬಾಂಡ್ ಪಡೆದು ವಾಹನವನ್ನು ಅವರಿಗೆ ಬಿಟ್ಟುಕೊಟ್ಟಿರುತ್ತೇನೆ ಹಾಗೂ ಫೋಟೊ ತೆಗೆಸಿರುತ್ತೇನೆ. ಅದೇ ದಿನ ಚಾಸಾ 17 ರವರಿಂದ 22 ಕುರಿಗೆ ಚಿಕಿತ್ಸೆ ನೀಡಿದ ವರದಿ ಹಾಗೂ ಸತ್ತ 15 ಕುರಿಗಳ ಪಿ ಎಮ್ ವರದಿ ನೀಡಿದ್ದು ಅದನ್ನು ಪಡೆದಿರುತ್ತೇನೆ.

5. ದಿನಾಂಕ 21.08.2022 ರಂದು ಪ್ರಕರಣಕ್ಕೆ ಸಂಬಂಧಪಟ್ಟ ಎಲ್ಲಾ ಪೊಟೋಗಳನ್ನು ಡಿವಿಡಿ ಅಲ್ಲಿ ಹಾಕಿ ಅದಕ್ಕೆ 65 ಬಿ ಸಾಕ್ಷ್ಯಾ ಅಧಿನಿಯಮದ ಪ್ರಮಾಣ ಪತ್ರವನ್ನು ಹಾಕಿರುತ್ತೇನೆ. ಅದೇ ದಿನ ಆರೋಪಿ ವಿರುದ್ಧ ಸಾಕ್ಷ್ಯಾಧಾರ ದೊರೆತ ಕಾರಣ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

6. ಸಾಕ್ಷಿಯು ಶವಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ 12 ಎಂದು, ಸಹಿಯನ್ನು ನಿಪಿ 12 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಶವ ಪಂಚನಾಮೆಯ ಪೊಟೊಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ 2

ರಿಂದ 5 ಎಂದು ಗುರುತಿಸಲಾಗಿದೆ. ಸಾಕ್ಷಿಯು ಅಪಘಾತದಲ್ಲಿ ಮೃತ ಪಟ್ಟ ಕುರಿಗಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ 13 ಎಂದು, ಸಹಿಯನ್ನು ನಿಪಿ 13 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಸದರಿ ಪಂಚನಾಮೆಯ ಪೊಟೊಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ 7 ಮತ್ತು 8 ಎಂದು ಗುರುತಿಸಲಾಗಿದೆ. ಸಾಕ್ಷಿಯು ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 4 ಎಂದು ಗುರುತಿಸಿದ್ದು, ಸಹಿಯನ್ನು ನಿಪಿ 4 ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ಸದರಿ ಪಂಚನಾಮೆಯ ಪೊಟೊಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ 5 ಮತ್ತು 6 ಎಂದು ಗುರುತಿಸಲಾಗಿದೆ.ಸಾಕ್ಷಿಯು ಪಿ ಎಮ್ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ 14 ಎಂದು, ಸಹಿಯನ್ನು ನಿಪಿ 14 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಐ ಎಮ್ ವಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ 15 ಎಂದು, ಸಹಿಯನ್ನು ನಿಪಿ 15 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಕಲಂ 133 ಐ ಎಮ್ ವಿ ನೊಟೀಸನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ 16 ಎಂದು, ಸಹಿಯನ್ನು ನಿಪಿ 16 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ದಾಖಲಾತಿಗಳನ್ನು ನೀಡುವ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ 17 ಎಂದು, ಸಹಿಯನ್ನು ನಿಪಿ 17 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಇಂಡಿಮಿನಿಟಿ ಬಾಂಡನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ 18 ಎಂದು, ಸಹಿಯನ್ನು ನಿಪಿ 18 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಕುರಿಗಳ ಪಿ ಎಮ್ ವರದಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗ ನಿಪಿ 19 ರಿಂದ 33 ಎಂದು, ಸಹಿಗಳನ್ನು ನಿಪಿ 19 ಎ ದಿಂದ 33 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಜಿಪಿಎ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ 34 ಎಂದು, ಸಹಿಯನ್ನು ನಿಪಿ 34 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಕುರಿಗಳ ಚಿಕಿತ್ಸೆ ನೀಡಿದ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ 35 ಎಂದು, ಸಹಿಯನ್ನು ನಿಪಿ 35 ಎ ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ಎ ಪಿ ವಕೀಲರಿಂದಃ</u>**

7. ಗಜೇಂದ್ರಗಡ ಕುಷ್ಟಗಿ ರಸ್ತೆ ರಾಜ್ಯ ಹೆದ್ದಾರಿ ರಸ್ತೆ ಎಂದರೆ ಸರಿ. ಸದರಿ ರಸ್ತೆ ಡಬಲ್ ರಸ್ತೆ ಇದೆ, ರಸ್ತೆ ಮಧ್ಯದಲ್ಲಿ ವಿಭಜಕ ಇಲ್ಲ. ಸದರಿ ರಸ್ತೆಯಲ್ಲಿ ರಾತ್ರಿ ಸಾಕಷ್ಟು ವಾಹನಗಳು ಸಂಚರಿಸುತ್ತವೆ ಎಂದರೆ ಸರಿ. ಸದರಿ ದಿನ ಕುರಿಗಳು ಡಾಂಬರ ರಸ್ತೆಮೇಲೆ ಹೋಗುತ್ತಿದ್ದವು ಎಂದರೆ ಸಾಕ್ಷಿಯು ಡಾಂಬರ ರಸ್ತೆ ಮತ್ತು ಮಣ್ಣಿನ ಮೇಲೆ ಹೋಗುತ್ತಿದ್ದವು ಎಂದು ನುಡಿಯುತ್ತಾರೆ. ನನ್ನ ತನಿಖೆಯ ಪ್ರಕಾರ ಗಜೇಂದ್ರಗಡ ಕಡೆ ಹೋಗುವ ರಸ್ತೆಯ ಎಡಭಾಗದಲ್ಲಿ ಕುರಿಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. 2 ತಂಡಗಳಾಗಿ ಕುರಿಗಳನ್ನು ಹೊಡೆದುಕೊಂಡು ಹೋಗುತ್ತಿದ್ದರು. ಮೊದಲನೇ ತಂಡದಲ್ಲಿ ಯಲ್ಲಪ್ಪ ಕುರಿಗಳ ಮುಂದೆ ಇದ್ದ, ಅವನ ಹಿಂದೆ ಚಾಸಾ 1 ರವರು ಇದ್ದರು, 2 ನೇ ತಂಡದಲ್ಲಿ ಪ್ರತ್ಯಕ್ಷ ಸಾಕ್ಷಿ ಲಗಮಣ್ಣ ಇದ್ದ. ಕುಷ್ಟಗಿ ಕಡೆಯಿಂದ ವಾಹನಗಳು ಬಂದರೆ ಕುರಿಗಳನ್ನು ಎಡಭಾಗಕ್ಕೆ ಕಚ್ಚಾ ರಸ್ತೆಗೆ ತೆಗೆದುಕೊಳ್ಳುತ್ತಿದ್ದರು, ನಂತರ ರಸ್ತೆಯ ಮೇಲೆ ಹೋಗುತ್ತಿದ್ದವು. ಸದರಿ ವಿಚಾರವನ್ನು ನಾನು ಪ್ರತ್ಯಕ್ಷ ಸಾಕ್ಷಿದಾರರ ಹೇಳಿಕೆ ಹಾಗೂ ಸ್ಥಳ ತನಿಖೆ ಆಧಾರದ ಮೇಲೆ ಹೇಳುತ್ತಿದ್ದೇನೆ. ಸದರಿ ವಿಚಾರವನ್ನು ಹೇಳಿಕೆಯಲ್ಲಿ ಬರೆದಿಲ್ಲ. ಸದರಿ ವಿಚಾರವನ್ನು ಪೀರ್ಯಾದಿದಾರ ದೂರು ಮತ್ತು ಹೇಳಿಕೆಯಲ್ಲಿ ಎಡಭಾಗಕ್ಕೆ ಹೋಗುತ್ತಿದ್ದೇವು ಎಂದು ಹೇಳಿರುತ್ತಾನೆ, ಆದರೆ ವಾಹನಗಳು ಬಂದಾಗ ಕುರಿಗಳನ್ನು ರಸ್ತೆಯ ಎಡಭಾಗಕ್ಕೆ ತೆಗೆದುಕೊಂಡು ಹೋಗುತ್ತಿದ್ದೇವು, ಗಾಡಿಗಳು ಹೋದ ನಂತರ ಡಾಂಬರ ರಸ್ತೆಗೆ ಬರುತ್ತಿದ್ದೇವು ಎಂದು ಹೇಳಿಲ್ಲ.

7. ಸ್ಥಳ ಪಂಚನಾಮೆ ತಯಾರಿಸಲು ಚಾಸಾ 1 ಮತ್ತು ಪಂಚರು ಮಾಹಿತಿ ನೀಡಿರುತ್ತಾರೆ. ಕಚ್ಚಾ ನಕಾಶೆಯನ್ನು ನಮ್ಮ ತನಿಖಾ ಸಹಾಯಕ ಸಿಹೆಚ್‌ಸಿ 128 ಬರೆದಿರುತ್ತಾರೆ. ಕಚ್ಚಾ ನಕಾಶೆಯಲ್ಲಿ ಲಾರಿ ಗಜೇಂದ್ರಗಡದಿಂದ ಕುಷ್ಟಗಿಗೆ ಬರುವಾಗ ರಸ್ತೆಯ ಎಡಭಾಗದಲ್ಲಿ ಇದೆ ಎಂದು ತೋರಿಸಲಾಗಿದೆ ಎಂದರೆ ಸಾಕ್ಷಿಯು ಅಪಘಾತ ಮಾಡಿದ ನಂತರ ಎಡಭಾಗಕ್ಕೆ ಹೋಗಿ ನಿಂತಿದೆ ಎಂದು ನುಡಿಯುತ್ತಾರೆ. ರಸ್ತೆಯ ಮೇಲೆ ಬ್ಲಡ್ ಮಾರ್ಕಗಳು ಇದ್ದವು. ಬ್ಲಡ್ ಮಾರ್ಕ್ ಎಂದು ಬರೆದಿಲ್ಲ ಆದರೆ ಮಾರ್ಕ್ ತೋರಿಸಿರುತ್ತೇವೆ. ಗುನ್ನೆ ಸ್ಥಳದ ಪಕ್ಕದಲ್ಲಿ ಮದಲಗಟ್ಟಿ ಗ್ರಾಮ ಇದೆ ಎಂದರೆ ಸರಿ. ಅಲ್ಲಿ ಇರುವ ಉದ್ಯಾನವನಕ್ಕೆ ಬೆಳಿಗ್ಗೆ ಸಾರ್ವಜನಿಕರು ವಾಯುವಿಹಾರಕ್ಕೆ ಬರುತ್ತಾರೆ ಎಂದರೆ ಸರಿ. ಮದಲಗಟ್ಟಿ ಗ್ರಾಮದವರನ್ನು ಪಂಚನಾಮೆಗೆ ಪಂಚರಾಗಿ ಮಾಡಿಲ್ಲ, ಆದರೆ ಲಭ್ಯ ಇದ್ದ ಸಾಕ್ಷಿಗಳನ್ನು ಮಾಡಿರುತ್ತೇವೆ. ನಾನು ಪಂಚನಾಮೆಗೆ ಹೋದ ಕಾಲಕ್ಕೆ ಸತ್ತ ಕುರಿಗಳು ಮತ್ತು ಲಾರಿ ಇದ್ದವು. ಸದರಿ ದಿನ ಸ್ಥಳ ಪಂಚನಾಮೆಗೆ ಪಂಚರ ತಲಾ ಒಂದು ಸಹಿ ಪಡೆದಿರುತ್ತೇನೆ. ಕುಷ್ಟಗಿ ದವಾಖಾನೆಗೆ ಶವ

ಪಂಚನಾಮೆ ಮಾಡಲು ಹೋದಾಗ ಅವರು ಅಲ್ಲಿ ಇದ್ದರು, ಅವರನ್ನು ಸಿಬ್ಬಂದಿ ಮೂಲಕ ಕರೆಸಿರುತ್ತೇನೆ. ಇಬ್ಬರೂ ಪಂಚರು ಸ್ಥಳ ಪಂಚನಾಮೆ ಮಾಡಲು ಮಾಹಿತಿ ಕೊಟ್ಟಿರುತ್ತಾರೆ.

8. ದೂರು ಕೊಟ್ಟವನು ಮೃತ ಯಲ್ಲಪ್ಪನ ಸಂಬಂಧಿಕ ಅಲ್ಲ. ನಾನು ಸದರಿ ದಿನ ಗುನ್ನೆ ಸ್ಥಳಕ್ಕೆ ಹೋಗಿಲ್ಲ ಮತ್ತು ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಅವರು ಸಾವಿರಾರು ಕುರಿಗಳನ್ನು ಡಾಂಬರ ರಸ್ತೆಯ ಮಧ್ಯದಲ್ಲಿ ಹೊಡೆದುಕೊಂಡು ಹೋಗುವ ಸಮಯದಲ್ಲಿ ಯಾವುದೋ ಗಾಡಿ ಕುರಿಗಳಿಗೆ ಡಿಕ್ಕಿ ಆಗಿದ್ದು, ಯಾವುದು ಗಾಡಿ ಸಿಗದ ಕಾರಣ ಆರೋಪಿಯ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಡಾಂಬರ ರಸ್ತೆಯ ಮೇಲೆ ಕುರಿಗಳನ್ನು ಹೊಡೆದುಕೊಂಡು ಹೋಗಿ ಸಾರ್ವಜನಿಕರಿಗೆ, ವಾಹನಗಳಿಗೆ ತೊಂದರೆ ನೀಡಿದರೂ ಸಹ ಅವರ ಮೇಲೆ ನಾನು ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಯಾವುದೇ ತಪ್ಪು ಇಲ್ಲದಿದ್ದರೂ ಸಹ ಕುರಿಗಾರರಿಗೆ ಅನುಕೂಲ ಮಾಡಲು ನಾನು ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಠಾಣೆಯಲ್ಲಿಯೇ ಪಂಚನಾಮೆಗಳನ್ನು ತಯಾರಿಸಿ, ಪಂಚರ ಸಹಿ ಪಡೆದಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ಓ. ಹೇ.ಕೇ. ಸರಿ ಇದೆ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ. ನ್ಯಾ.ದಂಡಧಿಕಾರಿಗಳು, ಕುಷ್ಟಗಿ**